ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.

## ವಿಷಯ

ಕೋಲಾರ ನಗರದಲ್ಲಿರುವ ಶ್ರೀ ದೇವರಾಜ ಅರಸು ಎಜುಕೇಷನಲ್ ಟ್ರಸ್ಟ್ ನಿಂದ ನಡೆಯುತ್ತಿರುವ ಆರ್.ಎಲ್.ಜಾಲಪ್ಪ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯು, ಕೋಲಾರ ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮುಂದುವರೆದಂತೆ ಈ ಸಂಸ್ಥೆ ಕಳೆದ 2002–03 ರಿಂದ 2020–21 ನೇ ಸಾಲಿನವರೆಗೆ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿರುವುದಿಲ್ಲ. ನಗರಸಭೆ ಕಾರ್ಯಾಲಯವು ಸಾಕಷ್ಟು ನೋಟಿಸ್ ನೀಡಿದ್ದರೂ ಸಹ ಈ ಸಂಸ್ಥೆ ಪ್ರಸ್ತುತ ಬಾಕಿ ಉಳಿಸಿಕೊಂಡಿರುವ ಮೊತ್ತ ರೂ.12,57,23,688 (ಹನ್ನೆರಡು ಕೋಟಿ ಐವತ್ತೇಳು ಲಕ್ಷದ ಇಪ್ಪತ್ಮೂರು ಸಾವಿರದ ಆರು ನೂರ ಎಂಬತ್ತೆಂಟು) ರೂಪಾಯಿಗಳನ್ನು ಪಾವತಿಸಿರುವುದಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ ಆಸ್ತಿಗಳ ಮಾಲಿಕರು ಸ್ವಯಂ ಘೋಷಿತವಾಗಿ ಆಸ್ತಿ ತೆರಿಗೆಯನ್ನು ಪಾವತಿಸಲು ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮದಂತೆ ಸಂಸ್ಥೆಯಿಂದ ಬಾಕಿ ಹಣ ಪಾವತಿ ಮಾಡಬೇಕಾಗಿರುತ್ತದೆ. ಇದಲ್ಲದೇ ಸಂಸ್ಥೆಯ ಒಳಗಡೆ ಹಲವಾರು ಹೊಸ ಕಟ್ಟಡಗಳು ಕಾಮಗಾರಿಗಳು ನಡೆಯುತ್ತಿದೆ, ಆದರೆ ಇವುಗಳಿಗೆ ನಿಯಮದಂತೆ ನಗರಸಭೆಯಿಂದ ನಕ್ಷೆಯ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಈ ಸಂಸ್ಥೆ ನಕ್ಷೆಯ ಅನುಮೋದನೆ ಪಡೆಯದೇ, ದೌರ್ಜನ್ಯದಿಂದ ಕಟ್ಟಡ ಕಾಮಗಾರಿ ನಡೆಸುತ್ತಿದ್ದಾರೆ. ಇದರಿಂದ ನಗರಸಭೆಗೆ ಬರಬೇಕಾಗಿರುವ ಹಣ ಹಾಗೂ ಕಟ್ಟಡ ಕಾರ್ಮಿಕರ ನಿಧಿಗೆ ಶೇ. 1ರಷ್ಟು ಬರಬೇಕಾಗಿರುವ ಹಣವನ್ನು ಕಟ್ಟದೆ, ನಗರಸಭೆಯನ್ನು ವಂಚಿಸುತ್ತಿದ್ದಾರೆ. ಇದಲ್ಲದೇ ನಗರಸಭೆ ಅಧಿಕಾರಿಗಳು ಬಾಕಿ ವಸೂಲಿಗೆ ಹೋದಂತ ಸಮಯದಲ್ಲಿ ಅಧಿಕಾರಿಗಳ ಮೇಲೆ ದರ್ಪ ತೋರಿಸುತ್ತಿದ್ದಾರೆ. ಕೋಲಾರ ನಗರಸಭೆ ಈಗಾಗಲೇ ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಕೋಲಾರ ನಗರಭೆಗೆ ಪಾವತಿ ಮಾಡಬೇಕಾಗಿರುವ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವ ಅನಿವಾರ್ಯತೆ ಇರುತ್ತದೆ.

## ಉತ್ತರ

ಕೋಲಾರ ನಗರಸಭೆಗೆ ಸಂಬಂಧಿಸಿದಂತೆ ವಾರ್ಡ್ ನಂ.01 ಟಮಕ ಪ್ರದೇಶದ ಶ್ರೀ ದೇವರಾಜ ಅರಸು ಎಜುಕೇಷನಲ್ ಟ್ರಸ್ಟ್ ನಿಂದ ನಡೆಯುತ್ತಿರುವ ಆರ್.ಎಲ್.ಜಾಲಪ್ಪ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಈ ಸಂಸ್ಥೆ ಕಳೆದ 2002–03 ರಿಂದ 2021–22 ನೇ ಸಾಲಿನವರೆಗೆ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿಲ್ಲವಾದ್ದರಿಂದ ಕೋಲಾರ ನಗರಸಭೆಯಿಂದ ದಿನಾಂಕ:24.05.2019 ಮತ್ತು 28.05.2020 ರಂದು ಸ್ವಯಂ ಘೋಷಿತ ಆಸ್ತಿ ತೆರಿಗೆಯ ಬಾಕಿ ಮೊತ್ತ ರೂ.12,62,91,800/– ಗಳನ್ನು ಪಾವತಿಸುವಂತೆ ಕರ್ನಾಟಕ ಪುರಸಭೆಗಳ ಅಧಿನಿಯ 1964 ಕಲಂ 101 ರಿಂದ 107ರ ರವಗಿನ ನಿಯಮಗಳಂತೆ ನೋಟೀಸ್ ನೀಡಲಾಗಿರುತ್ತದೆ. (ಅನುಬಂಧ–1 ಲಗತ್ತಿಸಿದೆ).

ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು, ಇಲ್ಲಿ ಶ್ರೀ ದೇವರಾಜು ಅರಸು ಎಜುಕೇಷನಲ್ ಟ್ರಸ್ಟ್ ದಿನಾಂಕ:12.08.2020 ರಂದು ತೆರಿಗೆ **ವಿಚಾರವಾಗಿ ದಾವೆ** ಹೂಡಿಲಾಗಿದೆ. (ಅನುಬಂಧ–2 ಲಗತ್ತಿಸಿದೆ). ಈ ದಾವೆಯು ಇನ್ನು ವಿಚಾರಣೆ ಹಂತದಲ್ಲಿರುತ್ತದೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಸ್ವಯಂ ಘೋಷಿತ ಆಸ್ತಿ ತೆರಿಗೆ ನಿಯಮಗಳಂತೆ ತೆರಿಗೆ ಲೆಕ್ಕಾಚಾರ ಮಾಡಲಾಗಿ 2002–03 ನೇ ಸಾಲಿನಿಂದ 2020–21 ಸಾಲಿನವರೆಗೂ ಒಟ್ಟು ತೆರಿಗೆ ಮೊತ್ತ **ರೂ.12,57,23,688**/–ಗಳು ಬಾಕಿಯಿದ್ದು, ಅದರಲ್ಲಿ ದಿನಾಂಕ: 11.04.2017 ರಂದು ರೂ.17,31,640/–; ದಿನಾಂಕ:11.04.2017 ರಂದು ರೂ.44,723/–; ದಿನಾಂಕ:08.02.2022 ರಂದು ರೂ. 03.00 ಕೋಟಿ, ದಿನಾಂಕ:24.03.2022 ರಂದು ರೂ.31,81,563/– ಮತ್ತು ದಿನಾಂಕ:26.04.2022 ರಂದು ರೂ.26,69,507/– ರೂಗಳನ್ನು ಚೆಕ್ ಮೂಲಕ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಪಾವತಿಸಲಾಗಿದೆ ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ. ಬಾಕಿ ತೆರಿಗೆ ಮೊತ್ತ ರೂ. 8,80,96,255/– ಪಾವತಿಗೆ ಬಾಕಿ ಇರುತ್ತದೆ. ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರಡಿಯಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಮುಂದುವರೆದು, ಶ್ರೀ ದೇವರಾಜ ಎಜುಕೇಷನಲ್ ಟ್ರಸ್ಟ್, ಕೋಲಾರ ರವರು ಯಾವುದೇ ಕಟ್ಟಡ ಪರವಾನಗಿಯನ್ನು ಪಡೆದು ಕೊಳ್ಳದೆ ಅನಧೀಕೃತವಾಗಿ ಕಟ್ಟಡ ನಿರ್ಮಿಸುತ್ತಿರುವುದು ಕೋಲಾರ ನಗರಸಭೆ ಗಮನಕ್ಕೆ ತಿಳಿದು ಬಂದ ತಕ್ಷಣವೇ ಈ ಕಛೇರಿಯಿಂದ ದಿನಾಂಕ:20.09.2021, 27.09.2021, 19.01.2022 ಮತ್ತು 05.02.2022 ರಂದು ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಲು 1,2,3 ಹಾಗೂ ಅಂತಿಮ ನೋಟೀಸ್‌ಗಳನ್ನು ನೀಡಿದ್ದರೂ ಸಹ(ಅನುಬಂಧ–4 ಲಗತ್ತಿಸಿದೆ) ಸದರಿ ಸಂಸ್ಥೆಯು ಯಾವುದೇ ಉತ್ತರ ನೀಡದೆ ಕಟ್ಟಡ ಕಾಮಗಾರಿಯನ್ನು ಮುಂದುವರೆಸಿರುತ್ತಾರೆ. ಕಟ್ಟಡ ಪರವಾನಗಿ ಪಡೆಯದೆ ಮುಂದುವರೆಸಿದ ಕಾರಣ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಅಡಿಯಲ್ಲಿ ನಿಯಮಾನುಸಾರ ಕಾನೂನು ರೀತ್ಯ ಕ್ರಮವಹಿಸಲಾಗುವುದು.

**ಸಂಖ್ಯೆ: ನಅಇ 249 ಜಿಇಎಲ್ 2022**

ಎನ್. ನಾಗರಾಜು (ಎಂಟಿಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಅನುಬಂಧ-1

# ನಗರಸಭೆ ಕಾರ್ಯಾಲಯ, ಕೋಲಾರ


ದೂರವಾಣಿ ಸಂಖ್ಯೆ : 08152-220346 ಇ-ಮೇಲ್ : itstaff_ulb_kolar@yahoomail.com

ಸಹಾಯವಾಣಿ : 08152-220007 ವೆಬ್‌ಸೈಟ್ :www.kolarcity.mrc.gov.in


ಸಂಖ್ಯೆ:ನಸಕೋ/ಕಂ.ಶಾಖೆ/ಸಿ.ಆರ್/53/2019-20 ದಿನಾಂಕ:24.05.2019.

## ಸ್ವಯಂಘೋಷಿತ ಆಸ್ತಿ ತೆರಿಗೆ ಪಾವತಿಸುವ ನೋಟೀಸ್

(ಕರ್ನಾಟಕ ಪುರಸಭೆಗಳ ಅಧಿನಿಯ 1964 ರ ಕಲಂ 101 ರಿಂದ 107ರ ವರಗಿನ ನಿಯಮಗಳು.)

| | |
|---|---|
| ಮಾಲೀಕರ ಹೆಸರು ಶ್ರೀ/ಶ್ರೀಮತಿ | ಶ್ರೀ ದೇವರಾಜು ಅರಸು ಎಜುಕೇಷನಲ್ ಟ್ರಸ್ಟ್, ಟಮಕ ಕೋಲಾರ |
| ಖಾತಾ ನಂ/ಅಸೆಸ್‌ಮೆಂಟ್ ನಂ./ಸರ್ವೆ ನಂ. | 145, 147, 148&156, 159 |
| ವಿಳಾಸ | ಶ್ರೀ ದೇವರಾಜು ಅರಸು ಎಜುಕೇಷನಲ್ ಟ್ರಸ್ಟ್, ಟಮಕ ಕೋಲಾರ. |

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 101 ರಿಂದ 107 ರವರೆಗಿನ ನಿಯಮಗಳನ್ವಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಎಲ್ಲಾ ಕಟ್ಟಡ (ಅಧಿಕೃತ/ಅನಧಿಕೃತ) ಹಾಗೂ ನಿವೇಶನಗಳಿಗೆ ಕಡ್ಡಾಯವಾಗಿ ಪ್ರತಿ ವರ್ಷದ ಪ್ರಾರಂಭದಲ್ಲಿಯೇ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ ಆಸ್ತಿಗಳ ಮಾಲೀಕರು ಸ್ವಯಂಘೋಷಿತವಾಗಿ ಆಸ್ತಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಆದರೆ ಕೋಲಾರ ನಗರಸಭೆ ವ್ಯಾಪ್ತಿಯ ಮೇಲ್ಕಂಡ ವಿಳಾಸದಲ್ಲಿನ ನಿಮ್ಮ ಕಟ್ಟಡ/ನಿವೇಶನಕ್ಕೆ ಸಂಬಂಧಿಸಿದಂತೆ ಸ್ವಯಂ ಘೋಷಿತವಾಗಿ ತಾವು ಆಸ್ತಿ ತೆರಿಗೆ ಪಾವತಿಸಿರುವುದನ್ನು ಪರಿಶೀಲಿಸಲಾಗಿದೆ. ಆದರೆ ಕೋಲಾರ ನಗರ ವ್ಯಾಪ್ತಿಯಲ್ಲಿನ ಕಟ್ಟಡ/ನಿವೇಶನಗಳಿಗೆ ನಿಯಮಾನುಸಾರ ನಿಗಧಿಪಡಿಸಿಕೊಂಡ ಆಸ್ತಿ ತೆರಿಗೆ ಮೊತ್ತಕ್ಕಿಂತ ಕಡಿಮೆಯಾಗಿ ತಾವು ಘೋಷಣೆ ಮಾಡಿಕೊಂಡು ಆಸ್ತಿ ತೆರಿಗೆಯನ್ನು ಪಾವತಿಮಾಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಕರ್ನಾಟಕ ಪುರಸಭೆಗಳ ಅಧಿನಿಯ 1964 ರ ಕಲಂ 105(6) ನಿಯಮಗಳಂತೆ ಈ ನೋಟೀಸ್ ತಲುಪಿದ 30 ದಿವಸಗಳೊಳಗಾಗಿ ಈ ಕೆಳಕಾಣಿಸಿದ ಸ್ವಯಂ ಘೋಷಿತ ಆಸ್ತಿ ತೆರಿಗೆಯ ವ್ಯತ್ಯಾಸದ ಮೊತ್ತವನ್ನು ಪಾವತಿಸಬೇಕಾಗುತ್ತದೆ.

| ಕ್ರ.ಸಂ | ಸರ್ವೆ ನಂ/ ಖಾತಾ ನಂ | ವರ್ಷ | ಪಾವತಿಸಬೇಕಾದ ಆಸ್ತಿ ತೆರಿಗೆ ಮೊತ್ತ | ಪಾವತಿಸಿರುವ ಆಸ್ತಿ ತೆರಿಗೆ ಮೊತ್ತ | ಪಾವತಿಸಬೇಕಾದ ವ್ಯತ್ಯಾಸ ಮೊತ್ತ |
|---|---|---|---|---|---|
| 01 | 145 | 2002-03 ರಿಂದ 2018-19 ರವರೆಗೆ | 1,26,34,227 | 24,88,325 | 1,01,45,902 |
| 02 | 147 | | 2,76,42,667 | 35,57,124 | 2,40,85,543 |
| 03 | 148&156 | | 6,89,00,630 | 72,49,723 | 6,16,50,907 |
| 04 | 159 | | 1,83,25,541 | 39,84,853 | 1,43,40,688 |
| ಒಟ್ಟು | | | **12,75,03,065** | **1,72,80,025** | **11,02,23,040** |

ಈ ಮೇಲ್ಕಂಡಂತೆ ಸ್ವಯಂಘೋಷಿತ ಆಸ್ತಿ ತೆರಿಗೆಯ ವ್ಯತ್ಯಾಸದ ಮೊತ್ತವನ್ನು ಈ ನೋಟೀಸ್ ತಲುಪಿದ ಕೂಡಲೇ ಕಡ್ಡಾಯವಾಗಿ ಪಾವತಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮಗಳನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ಪೌರಾಯುಕ್ತರು
ನಗರಸಭೆ ಕೋಲಾರ

Scanned By Scanner Go

ಅನುಬಂಧ - 2





< back

Status: Pending

| | | |
|---|---|---|
| **Case Number:** WP 4555/2021 (KAHC010233002020) | **Classification:** LB TAX | **Date of Filing:** 12/08/2020 16:50:34 |
| **Petitioner:** SHRI D DEVARAJ URS EDUCATION TRUST | **Pet. Advocate:** SHANMUKHAPPA | |
| **Respondent:** THE STATE OF KARNATAKA | **Resp. Advocate:** | |
| **Filing No.:** WP 10449/2020 | **Judge:** HEMANT CHANDANGOUDAR | |
| **Last Posted For:** PRELIMINARY HEARING - B GROUP | **Last Date of Action:** 12/09/2022 | **Last Action Taken:** ADJOURNED |
| **Next Hearing Date:** 28/09/2022 | | |

Daily Orders: WP 4555/2021

1 HEMANT CHANDANGOUDAR 12/09/2022

Sri. Maruthi, learned counsel submits that
Sri. J.G. Chandra Mohan, learned counsel appearing for respondent No.2 is no more.
Issue Court notice to respondent No.2.
Office is directed to delete the name of Sri. J.G. Chandra Mohan, learned counsel from the cause list.
List this matter on 28.09.2022.

2 HEMANT CHANDANGOUDAR 17/08/2022

At the request of learned counsel for respondent No.2, list on 12.09 2022.

3 KRISHNA S.DIXIT 21/04/2022

At request, call this matter after Summer Vacation-2022.

4 HEMANT CHANDANGOUDAR 18/02/2022

At request of learned counsel for respondent No.2, list this matter after two weeks.

5 HEMANT CHANDANGOUDAR 31/01/2022

At the request, list this petition on 18.02.2022.

6 SACHIN SHANKAR MAGADUM 01/06/2021

Learned counsel appearing for the 2nd respondent seeks four weeks time to file statement of objections. List this matter after four weeks.

| | | |
|---|---|---|
| 7 | R DEVDAS | 04/03/2021 |

ORDER

Learned High Court Government Pleader waives notice for respondent No.1.

Sri J.G.Chandra Mohan, learned counsel accepts notice for respondent No.2.

Learned counsel for the petitioner is directed to serve 2 copies of the writ petition along with annexures on Sri J.G.Chandra Mohan, learned counsel for respondent No.2.

List this matter next week.

6-2008-3

A/c Payee

kotak

492187

8269-SRI DEVARAJ URS MED COLLEGE

दिनांक Date 0 8 0 2 2 0 2 2
D D M M Y Y Y Y

Valid for three months from date of issue

On demand pay COMMISSIONER CMC KOLAR को या उनके आदेश पर Or Order

रुपये Rupees Three Crore only

अदा करें। ₹ 3,00,00,000.00

Payable At *** Not Over INR. 3,00,00,000.00 ***

For Value Received
for Kotak Mahindra Bank Ltd.

KOLAR
( 8268 )

Purchaser:
SRI DEV URS ACAD & RES

K.M. RAJEEV
185102
BRANCH MANAGER

56984

H. RAMANJANEYA SETTY
EMP. No. 56984

(Drawee Branch)

⑈492187⑈ 000485000⑆ 16

Scanned By Scanner Go

**kotak**
Kotak Mahindra Bank 3269-SRI [illegible] MED COLLEGE

592205

Valid for three months from date of issue

दिनांक Date 2 4 0 3 2 0 2 2
D D M M Y Y Y Y

[illegible] pay COMMISSIONER CHC KOLAR [illegible] को या उनके आदेश पर Or Order

रु Rupees Thirty One Lakh Eighty One Thousand Five Hundred Eighty Three only

अदा करें। ₹ 31,81,583.00

[illegible]yable At *** Not Over INR [illegible] 31,81[illegible]

For Value Received.
for Kotak Mahindra Bank Ltd.

[redacted] Purchaser SRI DEV URS ACA[illegible]ES

⑈592205⑈ 000485000⑆ 16

Scanned By Scanner Go

kotak Kotak Mahindra Bank 8269-SRI DEVARAJ URS MED COLLEGE

592214

Valid for three months from date of issue

दिनांक Date 2 6 0 4 2 0 2 2
D D M M Y Y Y Y

...mand pay COMMISSIONER CMC, KOLAR ... को या उनके आदेश पर Or Order

Rupees Twenty Six Lakh Sixty Nine Thousand Five Hundred Seven only

अदा करें। ₹ 26,69,507.00

...le At *** Not Over INR. 26,69,507.00 ***

for Value Received
for Kotak Mahindra Bank Ltd.

[redacted]

Purchaser:
SRI DEV URS ACAD & RES

K. KRISHNA MURTHY
Emp. Code: 57983

Please sign above this line

...branch)

⑈592214⑈ 000485000⑆ 16

Scanned By Scanner Go

kotak

Kotak Mahindra Bank

Kolar - 563101
Karnataka India

Valid for three months from date of issue

Date: 11 09 2017

D D M M Y Y Y Y

Pay Commissioner, CMC, Kolar — Or Bearer

Rupees Seventeen lakh thirty one thousand, six hundred and Forty rupees only/- ₹ 17,31,640/-

A/c No. 221010022675

SAVINGS BANK (GRANT)

CBS

For Sri Dev Urs Acad & Res

Jalappa R L

A V M Kutty

Authorized signatory

Payable At par at all branch locations of Kotak Mahindra Bank Ltd.

⑈001065⑈ 563485103⑆ 022675⑈ 31

Scanned By Scanner Go

# ನಗರಸಭಾ ಕಾರ್ಯಾಲಯ. ಕೋಲಾರ

**3**

ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಗೆ ಹಣ ತುಂಬುವ ಚಲನ್

ತೆರಿಗೆ ಪಾವತಿದಾರರ ಪ್ರತಿ

ದಿ: | 1 | 2 | 0 | 4 | 2 | 0 | 1 | 7 |

ಮಾಲೀಕನ ಮತ್ತು ತಂದೆಯ ಹೆಸರು: Karnataka Bank

ವಾರ್ಡ್ ನಂಬರ್ ಮತ್ತು ಹೆಸರು: Ward – 1 Tamaka

ಸ್ವತ್ತಿನ ನಂ. / ಖಾತಾ ನಂಬರ್ ನಂ.: 916/977

ಸ್ವಯಂ ಘೋಷಣೆ ಆಸ್ತಿ ತೆರಿಗೆ ವಿವರಪಟ್ಟಿ ನಂ.: 6016

ಮಾಲೀಕನ ಹೆಸರು: President / Registrar

ವಿಳಾಸ: ........

ಉಪಯೋಗದಾರರ ಹೆಸರು: DO

ವಿಳಾಸ: ........

ಭೂಮಿ ಮತ್ತು ಕಟ್ಟಡದ ವಿವರ: Katha NO – 916/977

ವಸತಿಯೇತರ / ವಸತಿ (✓ ಸರಿಯಾದುದನ್ನು ಗುರುತಿಸಿ)

ನಿರ್ಧರಣಾ ವರ್ಷ: | 2 | 0 | 1 | 7 | – | 2 | 0 | 1 | 8 |

ಒಟ್ಟು ಆಸ್ತಿ ತೆರಿಗೆ: ರೂ. 35304/-

ಇತರೆ ವಸೂಲಿಗಳು: ರೂ. 9179/-

Sum 240/-

| ಸಂದಾಯವಾದ ಒಟ್ಟು ಮೊತ್ತ |
|---|
| ರೂ. 44,723/- |

ಸಂದಾಯ ಮಾಡಿದ ಒಟ್ಟು ಮೊತ್ತ (ಅಕ್ಷರಗಳಲ್ಲಿ): forty four thousand seven hundred twenty three only

ನಗದು ☑ ಚೆಕ್ / ಡಿ.ಡಿ.ನಂ. 001141 ದಿ: 11/4/17

ಡಿ.ಡಿ. ☑ ಬ್ಯಾಂಕಿನ ಹೆಸರು: Kolar mahendra Bk

(✓ ಸರಿಯಾದುದನ್ನು ಗುರುತಿಸಿ)

| ಬ್ಯಾಂಕ್ ಖಾತೆ ಸಂಖ್ಯೆ | C/A-70501 |
|---|---|

ಹಣ ತುಂಬುವವರ ಸಹಿ

ನಗದು ಮೊಹರು ಮತ್ತು ಕ್ರಮ ಸಂಖ್ಯೆಯೊಂದಿಗೆ ಬ್ಯಾಂಕ್ ಅಧಿಕಾರಿಯ ಸಹಿ

EXECUTIVE ENG
Estate Division, S.D.
Kolar-563 101

TAMAKA

Scanned By Scanner Go

kotak
Kotak Mahindra Bank

Sri Devaraj Urs Medical College, Tamaka
Kolar - 563101
Karnataka India
IFSC : [illegible]

Valid for three months from date of issue

Date: 11042017
D D M M Y Y Y Y

Pay Commissioner CMC Kolar — Or Bearer

Rupees Forty four thousand seven hundred twenty three only.

₹ 44,723/-

A/c No 221010022675

SAVINGS BANK (ORANGE)
CBS

For Sri Dev Urs Acad & Res
Jalappa R L
A V M Kutty
Authorized signatory

Please sign above

05-11-2016
Payable At-par at all branch locations of Kotak Mahindra Bank Ltd.

⑈001141⑈ 563485103⑆ 022675⑈ 31

Scanned By Scanner Go

# ನಗರಸಭಾ ಕಾರ್ಯಾಲಯ. ಕೋಲಾರ

ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಗೆ ಹಣ ತುಂಬುವ ಚಲನ್

ತೆರಿಗೆ ಪಾವತಿದಾರರ ಪ್ರತಿ

3

ತಾ. 12 04 2017

ಬ್ಯಾಂಕಿನ ಮತ್ತು ಶಾಖೆಯ ಹೆಸರು: Karnataka Bank

ವಾರ್ಡ್ ನಂಬರ್ ಮತ್ತು ಹೆಸರು: Ward-1 Tamaka

ನಿವೇಶನ ನಂ. / ಅಸೆಸ್‌ಮೆಂಟ್ ನಂ.: 159

ಸ್ವಯಂ ಘೋಷಣೆ ಆಸ್ತಿ ತೆರಿಗೆ ವಿವರಪಟ್ಟಿ ನಂ.: 6015

ಮಾಲೀಕನ ಹೆಸರು: President / Registrar

ವಿಳಾಸ:

ಅನುಭೋಗದಾರನ ಹೆಸರು: Do

ವಿಳಾಸ:

ಭೂಮಿ ಮತ್ತು ಕಟ್ಟಡದ ವಿಸ್ತೀರ್ಣ: 159

ನಿವೇಶನವೇ / ಕಟ್ಟಡವೇ (✓ ಸರಿಯಾದುದನ್ನು ಗುರುತಿಸಿ): 8 Arc 0 guntas

ಪಾವತಿಸುವ ವರ್ಷ: 2017 2018

ಮೂಲ ಆಸ್ತಿ ತೆರಿಗೆ: ರೂ. 369024/-

ಇತರ ಸೆಸ್ಸುಗಳು: ರೂ. 95948/-

SWM 240/-

| ಸಂದಾಯವಾದ ಒಟ್ಟು ಮೊತ್ತ |
|---|
| ರೂ. 4,65,211/- |

ಸಂದಾಯ ಮಾಡಿದ ಒಟ್ಟು ಮೊತ್ತ (ಅಕ್ಷರಗಳಲ್ಲಿ): Four lakhs sixty five thousand two hundred eleven only

ನಗದು ☑ ಚೆಕ್ / ಡಿ.ಡಿ. ನಂ.: 081065 ತಾ. 11/4/17

ಚೆಕ್/ಡಿ.ಡಿ. ☑ ಬ್ಯಾಂಕಿನ ಹೆಸರು: Kotak mahendra B.K

(✓ ಸರಿಯಾದುದನ್ನು ಗುರುತಿಸಿ)

| ಬ್ಯಾಂಕ್ ಖಾತೆ ಸಂಖ್ಯೆ | C/A - 70501 |
|---|---|

ಬ್ಯಾಂಕಿನ ಮೊಹರು ಮತ್ತು ಕ್ರಮ ಸಂಖ್ಯೆಯೊಂದಿಗೆ ಬ್ಯಾಂಕ್ ಅಧಿಕಾರಿಯ ಸಹಿ

EXECUTIVE ENGI
Estate Division, S.D.
Kolar-563 101.

J.A.H.E.R. TAMAKA, KOLAR
No.

Scanned By Scanner Go

ಅನುಬಂಧ - 4

# ನಗರಸಭೆ ಕಾರ್ಯಾಲಯ, ಕೋಲಾರ

ದೂರವಾಣಿ ಸಂಖ್ಯೆ : 08152-220346 ಇ-ಮೇಲ್ : itstaff_ulb_kolar@yahoomail.com
ಸಹಾಯವಾಣಿ : 08152-220007 ವೆಬ್‌ಸೈಟ್ : www.kolarcity.mrc.gov.in

ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:05.02.2022.

## ಅಂತಿಮ ನೋಟೀಸ್

ವಿಷಯ: ಶ್ರೀ ದೇವರಾಜ ಅರಸು ಎಜುಕೇಷನ್ ಸಂಸ್ಥೆಯ ಜಾಗದಲ್ಲಿ ನಿರ್ಮಿಸುತ್ತಿರುವ ಅನಧಿಕೃತ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಲು ಈ ಕಛೇರಿಯಿಂದ 3 ನೋಟೀಸ್‌ಗಳು ನೀಡಿರುವ ಕುರಿತು.

ಉಲ್ಲೇಖ:
1. ಈ ಕಾರ್ಯಾಲಯದ ನೋಟೀಸ್ ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:20.09.2021.
2. ಈ ಕಾರ್ಯಾಲಯದ ನೋಟೀಸ್-2 ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:27.09.2021.
3. ಈ ಕಾರ್ಯಾಲಯದ ನೋಟೀಸ್-3 ಸಂಖ್ಯೆ:ನಸಕೋ/ಕಂ.ಶಾ/ ಸಿ.ಆರ್/154/2021-22 ದಿನಾಂಕ:19.01.2022.
4. ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮಗಳು.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1), (2) ಹಾಗೂ (3) ರ ಈ ಕಾರ್ಯಾಲಯದ ನೋಟೀಸ್‌ಗಳಂತೆ ಕೋಲಾರ ನಗರದ ವಾರ್ಡ್ ನಂ.01 ರ ಟಮಕ ಪ್ರದೇಶದಲ್ಲಿ ಶ್ರೀ ದೇವರಾಜ ಅರಸು ಎಜುಕೇಷನ್ ಸಂಸ್ಥೆಯ ಜಾಗದಲ್ಲಿ ನಿರ್ಮಿಸುತ್ತಿರುವ ಅನಧಿಕೃತ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಿ, ಸದರಿ ಕಟ್ಟಡಕ್ಕೆ ಸಂಬಂಧಿಸಿದ ಪರವಾನಗಿ ಹಾಗೂ ಇತರೆ ದಾಖಲೆಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು, ಆದರೂ ಸಹ ತಾವು ಕಟ್ಟಡ ಕಾಮಗಾರಿಯನ್ನು ಮುಂದುವರಿಸುತ್ತಿರುವುದು ಕಂಡುಬಂದಿರುತ್ತದೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮಗಳಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಿಸುವ ಯಾವುದೇ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳಿಂದ ಕಡ್ಡಾಯವಾಗಿ ಕಟ್ಟಡ ಪರವಾನಗಿಯನ್ನು ಪಡೆದು ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಕೋಲಾರ ನಗರಸಭೆ ವ್ಯಾಪ್ತಿಯ ಟಮಕ ಪ್ರದೇಶದಲ್ಲಿ ಶ್ರೀ ದೇವರಾಜ ಅರಸು ಎಜುಕೇಷನ್ ಸಂಸ್ಥೆಯ ಜಾಗದಲ್ಲಿ ತಾವು ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಿ, ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆದು ನಂತರ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿದೆ. ತಪ್ಪಿದಲ್ಲಿ ನೀವು ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡದ ಸಲಕರಣೆಗಳನ್ನು ಮುಟ್ಟುಗೋಲು ಹಾಕಿಕೊಂಡು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮಗಳನ್ವಯ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಅಂತಿಮವಾಗಿ ಸೂಚಿಸಲಾಗಿದೆ.

ಸಹಿ/-
ಪೌರಾಯುಕ್ತರು
ನಗರಸಭೆ ಕೋಲಾರ

ರವರಿಗೆ,

ಶ್ರೀ ದೇವರಾಜ ಅರಸು ಎಜುಕೇಷನ್ ಟ್ರಸ್ಟ್
ವಾರ್ಡ್ ನಂ.01, ಟಮಕ
ಕೋಲಾರ.

ಪ್ರತಿಯನ್ನು:-

1. ಆರಕ್ಷಕ ಉಪ ನಿರೀಕ್ಷಕರು, ಗಲ್‌ಪೇಟೆ ಪೊಲೀಸ್ ಠಾಣೆ, ಕೋಲಾರ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಕಛೇರಿ ಪ್ರತಿ.

ಪೌರಾಯುಕ್ತರು
ನಗರಸಭೆ ಕೋಲಾರ

ಅನುಬಂಧ-4

# ನಗರಸಭೆ ಕಾರ್ಯಾಲಯ, ಕೋಲಾರ

ದೂರವಾಣಿ ಸಂಖ್ಯೆ : 08152-220346 ಇ-ಮೇಲ್ : itstaff_ulb_kolar@yahoomail.com
ಸಹಾಯವಾಣಿ : 08152-220007 ವೆಬ್‌ಸೈಟ್ : www.kolarcity.mrc.gov.in

ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:19.01.2022.

## ನೋಟೀಸ್-3

ವಿಷಯ: ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮಗಳಂತೆ ಕಟ್ಟಡ ಪರವಾನಗಿ ಪಡೆದು ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಕುರಿತು.

ಉಲ್ಲೇಖ:
1. ಈ ಕಾರ್ಯಾಲಯದ ನೋಟೀಸ್ ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:20.09.2021.
2. ಈ ಕಾರ್ಯಾಲಯದ ನೋಟೀಸ್-2 ಸಂಖ್ಯೆ:ನಸಕೋ/ಕಂ.ಶಾ/ಸಿ.ಆರ್/154/2021-22 ದಿನಾಂಕ:27.09.2021.
3. ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮಗಳು.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರ ಈ ಕಾರ್ಯಾಲಯದ ನೋಟೀಸ್‌ಗಳಂತೆ ಕೋಲಾರ ನಗರದ ವಾರ್ಡ್ ನಂ.01 ರ ಟಮಕ ಪ್ರದೇಶದಲ್ಲಿ ಶ್ರೀ ದೇವರಾಜ ಎಜುಕೇಷನ್ ಸಂಸ್ಥೆಯ ಜಾಗದಲ್ಲಿ ನಿರ್ಮಿಸುತ್ತಿರುವ ಅನಧಿಕೃತ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಿ, ಕಟ್ಟಡಕ್ಕೆ ಸಂಬಂಧಿಸಿದ ಪರವಾನಗಿ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೂ ಸಹ ತಾವು ಕಟ್ಟಡ ಕಾಮಗಾರಿಯನ್ನು ಮುಂದುವರಿಸುತ್ತಿರುವುದು ಕಂಡುಬಂದಿರುತ್ತದೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮಗಳಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಿಸುವ ಯಾವುದೇ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳಿಂದ ಕಡ್ಡಾಯವಾಗಿ ಕಟ್ಟಡ ಪರವಾನಗಿಯನ್ನು ಪಡೆದು ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಕೋಲಾರ ನಗರಸಭೆ ವ್ಯಾಪ್ತಿಯ ಟಮಕ ಪ್ರದೇಶದಲ್ಲಿ ಶ್ರೀ ದೇವರಾಜ ಅರಸು ಎಜುಕೇಷನ್ ಸಂಸ್ಥೆಯ ಜಾಗದಲ್ಲಿ ತಾವು ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಿ, ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆದು ನಂತರ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿದೆ. ತಪ್ಪಿದಲ್ಲಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮಗಳನ್ವಯ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ಪೌರಾಯುಕ್ತರು 19/01
ನಗರಸಭೆ ಕೋಲಾರ

ರವರಿಗೆ,

ಶ್ರೀ ದೇವರಾಜ ಅರಸು ಎಜುಕೇಷನ್ ಟ್ರಸ್ಟ್,
ವಾರ್ಡ್ ನಂ.01, ಟಮಕ
ಕೋಲಾರ.